# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 19 |
| ಸದಸ್ಯರ ಹೆಸರು | : | ಶ್ರೀ ಬಸನಗೌಡ ಬಾದರ್ಲಿ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 17.08.2026. |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು. |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಸಿಂಧನೂರು ತಾಲ್ಲೂಕು ಇಡೀ ಕಲ್ಯಾಣ ಕರ್ನಾಟಕ ಭಾಗದಲ್ಲೇ ಅತೀ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬಂದಿದೆ</td></tr>
<tr><td>ಆ)</td><td>ಬಂದಿದ್ದಲ್ಲಿ, ಸಿಂಧನೂರು ತಾಲ್ಲೂಕನ್ನು ನೂತನ ಶೈಕ್ಷಣಿಕ ಜಿಲ್ಲೆಯೆಂದು ಘೋಷಿಸುವ ಬಗ್ಗೆ ಸರ್ಕಾರದ ನಿಲುವೇನು;</td><td rowspan="3">ಈ ಹಿಂದೆ ತುಮಕೂರು, ಬೆಳಗಾವಿ, ಉತ್ತರ ಕನ್ನಡ, ಬೆಂಗಳೂರು ನಗರ ಜಿಲ್ಲೆಗಳಲ್ಲಿ ಭೌಗೋಳಿಕ ವಿಸ್ತೀರ್ಣ ಮತ್ತು ತಾಲ್ಲೂಕುಗಳ ಸಂಖ್ಯೆ ಹಾಗೂ ಆಡಳಿತ ವ್ಯಾಪ್ತಿಯನ್ನು ಆಧರಿಸಿ ಶೈಕ್ಷಣಿಕ ಜಿಲ್ಲೆಗಳನ್ನು ಸೃಜಿಸಲಾಗಿರುತ್ತದೆ.<br><br>ವಿವರ:<br><br>
<table>
<tr><th>ಜಿಲ್ಲೆಯ ಹೆಸರು</th><th>ಒಟ್ಟು ತಾಲ್ಲೂಕುಗಳ ಸಂಖ್ಯೆ</th><th>ಮೂಲ ಜಿಲ್ಲೆಯ ತಾಲ್ಲೂಕುಗಳು</th><th>ಶೈಕ್ಷಣಿಕ ಜಿಲ್ಲೆಯ ತಾಲ್ಲೂಕುಗಳು</th></tr>
<tr><td>ತುಮಕೂರು</td><td>10</td><td>06 (ತುಮಕೂರು)</td><td>04 (ಮಧುಗಿರಿ)</td></tr>
<tr><td>ಬೆಳಗಾವಿ</td><td>15</td><td>07 (ಬೆಳಗಾವಿ)</td><td>08 (ಚಿಕ್ಕೋಡಿ)</td></tr>
<tr><td>ಉತ್ತರ ಕನ್ನಡ</td><td>11</td><td>05 (ಕುಮಟಾ)</td><td>06 (ಶಿರಸಿ)</td></tr>
<tr><td>ಬೆಂಗಳೂರು ನಗರ</td><td>09</td><td>05 (ದಕ್ಷಿಣ)</td><td>04 (ಉತ್ತರ)</td></tr>
</table>
ಆದರೆ, ರಾಯಚೂರು ಜಿಲ್ಲೆಯ ವಸ್ತುಸ್ಥಿತಿ ಈ ಕೆಳಕಂಡಂತಿರುತ್ತದೆ:<br><br>1. ರಾಯಚೂರು ಜಿಲ್ಲೆಯಲ್ಲಿ 05 ತಾಲ್ಲೂಕುಗಳು ಮಾತ್ರ ಇರುವುದರಿಂದ ಶೈಕ್ಷಣಿಕ ವ್ಯಾಪ್ತಿಯನ್ನು ವಿಂಗಡಿಸುವ ಅವಶ್ಯಕತೆ ಕಂಡುಬರುವುದಿಲ್ಲ.</td></tr>
<tr><td>ಇ)</td><td>ಸಿಂಧನೂರು ತಾಲ್ಲೂಕು ಶೈಕ್ಷಣಿಕ ಜಿಲ್ಲೆಯೆಂದು ಘೋಷಿಸಲು ಅಗತ್ಯವಿರುವ ಮಾನದಂಡಗಳೇನು;</td></tr>
<tr><td>ಈ)</td><td>ಸಿಂಧನೂರು ತಾಲ್ಲೂಕಿನ ಶಾಲೆಗಳ ಸಂಖ್ಯೆ, ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಭೌಗೋಳಿಕ ವ್ಯಾಪ್ತಿಯನ್ನು ಪರಿಗಣಿಸಿ, ಯಾವ ಕಾಲಮಿತಿಯೊಳಗೆ ಸಿಂಧನೂರು ತಾಲ್ಲೂಕನ್ನು ಪ್ರತ್ಯೇಕ ಶೈಕ್ಷಣಿಕ ಜಿಲ್ಲೆಯೆಂದು ಘೋಷಿಸಲಾಗುವುದು?</td></tr>
</table>

| | | |
|---|---|---|
| | | 2. ಶೈಕ್ಷಣಿಕ ಜಿಲ್ಲೆಯನ್ನು ಸಿಂಧನೂರಿನಲ್ಲಿ ಪ್ರಾರಂಭಿಸಿದಲ್ಲಿ ಆಡಳಿತಾತ್ಮಕವಾಗಿ ಸಂಬಂಧಿಸಿದ ಕಛೇರಿ ಹಾಗೂ ಹುದ್ದೆಗಳನ್ನು ಸೃಜಿಸಬೇಕಿರುತ್ತದೆ. ಇದರಿಂದ ಸರ್ಕಾರಕ್ಕೆ ಆರ್ಥಿಕ ಹೊರೆಯಾಗುವ ಸಂಭವವಿರುತ್ತದೆ.<br>3. ಜಿಲ್ಲಾ ಕೇಂದ್ರದಿಂದ ತಾಲ್ಲೂಕುಗಳಿಗೆ ಇರುವ ಅಂತರ ಗರಿಷ್ಟ 90 ಕಿ.ಮೀಗಳಿದ್ದು, ಈ ಕಾರಣದಿಂದ ಶೈಕ್ಷಣಿಕ ವಿಂಗಡನೆ ಸೂಕ್ತವಾಗಿರುವುದಿಲ್ಲ.<br>4. ಭೌಗೋಳಿಕ ವ್ಯಾಪ್ತಿಯು ಕೇವಲ 90 ಕಿ.ಮೀಗಳಾಗಿರುವುದರಿಂದ 05 ತಾಲ್ಲೂಕುಗಳ ನಡುವಿನ ಸಂಪರ್ಕ ಸಾಧನೆ ಹಾಗೂ ಆಡಳಿತ ವ್ಯಾಪ್ತಿಯು ಸುಗಮವಾಗಿರುತ್ತದೆ.<br>5. ಈ ಹಿಂದೆ ಸಮಗ್ರ ಜಿಲ್ಲೆಯಾಗಿದ್ದ ರಾಯಚೂರು ಜಿಲ್ಲೆಯನ್ನು ಆಡಳಿತಾತ್ಮಕವಾಗಿ ವಿಭಜಿಸಿ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳನ್ನಾಗಿ ವಿಭಜಿಸಲಾಗಿದೆ. ವಿಭಜಿಸಿದ ನಂತರ ರಾಯಚೂರು ಜಿಲ್ಲೆಯಲ್ಲಿ 05 ತಾಲ್ಲೂಕುಗಳಿದ್ದು ಆಡಳಿತಾತ್ಮಕ ಮತ್ತು ಶೈಕ್ಷಣಿಕವಾಗಿ ಕಾರ್ಯನಿರ್ವಹಿಸಲು ಅನುಕೂಲಕರವಾಗಿರುತ್ತದೆ.<br>6. ಶಾಲಾ ಶಿಕ್ಷಣ ಇಲಾಖೆಯಿಂದ ಒದಗಿಸಲಾಗುತ್ತಿರುವ ಸೇವೆಗಳನ್ನು ಪ್ರಸ್ತುತ ಗಣಕೀಕೃತಗೊಳ್ಳುತ್ತಿರುವುದರಿಂದ, ಇಲಾಖೆಯ ಎಲ್ಲಾ ಮಾಹಿತಿಯು Online ನಲ್ಲಿ ಅಧಿಕಾರಿಗಳಿಗೆ ಲಭ್ಯವಾಗುತ್ತದೆ.<br><br>ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಜಿಲ್ಲಾ ಕೇಂದ್ರ ರಾಯಚೂರಿನಿಂದ ಎಲ್ಲಾ ತಾಲ್ಲೂಕುಗಳು ಸೇರಿದಂತೆ ಸಿಂಧನೂರಿಗೆ ಸಾರಿಗೆ ಸಂಪರ್ಕ ಉತ್ತಮವಾಗಿದ್ದು, ಸಿಂಧನೂರನ್ನು ಹೊಸ ಶೈಕ್ಷಣಿಕ ಜಿಲ್ಲೆಯನ್ನಾಗಿ ಘೋಷಿಸುವ ಅವಶ್ಯಕತೆ ಕಂಡುಬರುವುದಿಲ್ಲ. |

ಇಪಿ 156 ಡಿಎಆರ್ 2026

**(ಎಸ್. ಮಧು ಬಂಗಾರಪ್ಪ)**

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.